**1** ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

ಸ್ಪೆಷಲ್ ಕೇಸ್: **23/2023**

ಫ್ರಾಸಾ- 3
ಚಾಸಾ- 3

| | | |
|---|---|---|
| ಸಾಕ್ಷಿದಾರರ ಹೆಸರು | : | ತ್ರಿಶಲಾ |
| ತಂದೆಯ ಹೆಸರು | : | ಡಿಲಾಕ್ಷ |
| ವಯಸ್ಸು | : | 15 ವರ್ಷ |
| ವೃತ್ತಿ | : | ವಿದ್ಯಾರ್ಥಿನಿ |
| ವಾಸ | : | ನಾಕಲಗೂಡು ಗ್ರಾಮ. |

ಸಾಕ್ಷಿಯನ್ನು ದಿನಾಂಕ **24-06-2024** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

ಸಾಕ್ಷಿಯು ಈ ಪ್ರಕರಣದ ಅಪ್ರಾಪ್ತ ವಯಸ್ಕಳಾಗಿದ್ದರಿಂದ ನ್ಯಾಯಾಲಯವು ಈ ಕೆಳಗಿನ ಪ್ರಶ್ನೆಗಳನ್ನು ಸಾಕ್ಷಿಗೆ ಕೇಳಲಾಯಿತು.

ಪ್ರಶ್ನೆ-1ಃ ನೀನು ಏನು ಮಾಡಿರುತ್ತೀಯಾ?
ಉತ್ತರಃ ನಾನು 9 ನೇ ತರಗತಿಯಲ್ಲಿ ವ್ಯಾಸಂಗ ಮಾಡುತಿದ್ದೇನೆ.

ಪ್ರಶ್ನೆ-2ಃ ಎಲ್ಲಿ ವಾಸ ಇದ್ದೀಯ?
ಉತ್ತರಃ ನಾಕಲಗುಡು ಗ್ರಾಮದಲ್ಲಿ ವಾಸ ಇದ್ದೇನೆ.

ಪ್ರಶ್ನೆ-3 ನ್ಯಾಯಾಲಯಕ್ಕೆ ಏಕೆ ಬಂದಿದ್ದೀಯ?
ಉತ್ತರಃ ಸಾಕ್ಷಿ ನುಡಿಯಲು ಬಂದಿರುತ್ತೇನೆ.

ಪ್ರಶ್ನೆ-4 ನ್ಯಾಯಾಲಯದಲ್ಲಿ ನಿಜ ಹೇಳಬೇಕೆ ಅಥವಾ ಸುಳ್ಳು ಹೇಳಬೇಕೆ?
ಉತ್ತರಃ ನಿಜ ಹೇಳಬೇಕು.

ಪ್ರಶ್ನೆ-5 ನೀನು ಯಾವ ಜಾತಿ?
ಉತ್ತರಃ ನಾನು ಪರಿಶಿಷ್ಟ ಜಾತಿಯ ಆದಿ ಕರ್ನಾಟಕ ಜನಾಂಗಕ್ಕೆ ಸೇರಿರುತ್ತೇನೆ.

ಸಾಕ್ಷಿಯು ನ್ಯಾಯಾಲಯ ಕೇಳಿದ ಪ್ರಶ್ನೆಗಳಿಗೆ ಸಮಂಜಸವಾಗಿ ಉತ್ತರ ನೀಡಿದ್ದರಿಂದ ಆಕೆ ಸಾಕ್ಷ್ಯ ನುಡಿಯಲು ಸಮರ್ಥಳಿರುತ್ತಾಳೆಂದು ಖಚಿತಪಡಿಸಿಕೊಂಡು ವಿಚಾರಣೆ ಮಾಡಲಾಯಿತು.

<u>ಮುಖ್ಯವಿಚಾರಣೆಃ ಸರ್ಕಾರಿ ಅಭಿಯೋಜಕರಿಂದ</u>:

ನಾನು, ಫ್ರಾಸಾ-1, ಫ್ರಾಸಾ-2, ತಂದೆ, ಚಾಸಾ-8 ಹಾಗೂ ಚಾಸಾ-9 ರವರು ನಮ್ಮ ಮನೆಯಲ್ಲಿ ವಾಸವಾಗಿದ್ದೇವೆ. ಆರೋಪಿಗಳ ಪರಿಚಯ ಇದೆ ಅವರು ನಮ್ಮ ಊರಿನವರು.

ನಾಕಲಗೂಡು ಗ್ರಾಮದ ಪೈಸಾರಿ ಜಾಗದಲ್ಲಿ ನನ್ನ ತಂದೆ ಮತ್ತು ಅಜ್ಜ ಮನೆ ಕಟ್ಟಲು ಎಂದು ಸ್ವಲ್ಪ ಜಾಗಕ್ಕೆ 10 ವರ್ಷದ ಮೊದಲು ಬೇಲಿ ಹಾಕಿದ್ದರು. 1 ರಿಂದ 3 ನೇ ಆರೋಪಿಗಳು ಆ ಜಾಗದಲ್ಲಿ ಮನೆ ಕಟ್ಟಿದ್ದರು. ಸದರಿ ಮನೆಯನ್ನು ಆರೋಪಿಗಳು ಒಂದೇ ದಿನದಲ್ಲಿ ಕಟ್ಟಿದ್ದರು. ನಾವು ಅಲ್ಲಿಗೆ ಹೋಗಿ ನಮ್ಮ ಜಾಗದಲ್ಲಿ ಮನೆ ಯಾಕೆ ಕಟ್ಟಿದ್ದೀರಾ ಎಂದು ಕೇಳಿದ್ದೆವು.

ದಿನಾಂಕ 18-07-2022 ರಂದು ಬೆಳಿಗ್ಗೆ ನಾನು, ಫ್ರಾಸಾ-1 ಹಾಗೂ ಚಾಸಾ-3 ಬಟ್ಟೆ ಹಾಗೂ ಪಾತ್ರೆಗಳನ್ನು ತೆಗೆದುಕೊಂಡು ಆರೋಪಿತರು ಕಟ್ಟಿದ್ದ ಮನೆಗೆ ಹೋಗಿ ಮನೆಯ ಒಳಗಡೆ ಬಟ್ಟೆಗಳನ್ನು ಇಟ್ಟು ಅಡುಗೆ ಮಾಡುತಿದ್ದೆವು. ಬೆಳಿಗ್ಗೆ 7.30 ಗಂಟೆ ಸಮಯಕ್ಕೆ 1 ಮತ್ತು 2 ನೇ ಆರೋಪಿಗಳು ಅಲ್ಲಿಗೆ ಬಂದು ಅವರು ಸಹ ಅಡುಗೆ ಮಾಡಲು ಪ್ರಾರಂಭಸಿದ್ದರು. ಆ ಬಳಿಕ ಆರೋಪಿಗಳು ನನ್ನ ತಾಯಿಯ ಬಟ್ಟೆಗಳನುನ ಎಳೆದು ಹರಿದರು ನಂತರ ಪೊಲೀಸರಿಗೆ ದೂರು ನೀಡಿದ್ದರು. 3 ಹಾಗೂ 4 ನೇ ಆರೋಪಿಗಳು ಸ್ಥಳಕ್ಕೆ ಬಂದು ನನ್ನ ತಾಯಿಗೆ ಹಲ್ಲೆ ಮಾಡಿ ಫ್ರಾಸಾ-2 ರವರಿಗೆ 2 ನೇ ಆರೋಪಿ ಕೆನ್ನೆಗೆ ಹೊಡೆದರು. ಮುಂದುವರೆದು ಆರೋಪಿಗಳು ನನ್ನ ತಾಯಿಗೆ ಬೆವರ್ಸಿಗಳು ಮತ್ತು ಹೊಲೆಯ ಜಾತಿಗೆ ಸೇರಿದವರು ಎಂದು ಬೈದರು. ನಾನು ಮತ್ತು ನನ್ನ ಅಕ್ಕ ಅಲ್ಲಿಯೇ ಇದ್ದೆವು, ನನ್ನ ತಾಯಿ ಆಸ್ಪತ್ರೆಗೆ ಹೋದರು. ಆ ಬಳಿಕ ಚಾಸಾ-8 ಮತ್ತು ಚಾಸಾ-9 ಸದರಿ ಸ್ಥಳಕ್ಕೆ ಬಂದರು. ದೂರು ನೀಡಿದ ನಂತರ ಮಹಿಳಾ ಪೊಲೀಸ್ ಅಲ್ಲಿಗೆ ಬಂದು ನನ್ನ ತಾಯಿಯನ್ನು ವಿಚಾರಿಸಿದಾಗ ಆಕೆ ಆಸ್ಪತ್ರೆಗೆ ಹೋಗಿದ್ದರು. ಆ ದಿನ ಸಂಜೆ ಚಾಸಾ-8 ಹಾಗೂ ಚಾಸಾ-9 ರವರನ್ನು ಪೊಲೀಸರು ಕರೆದುಕೊಂಡು ಹೋಗಿದ್ದು, ನಾವು ಮನೆಗೆ ಹೋದೆವು.

ಆರೋಪಿಗಳು ಈ ದಿನ ನ್ಯಾಯಾಲಯದಲ್ಲಿ ಉಪಸ್ಥಿತರು ಇದ್ದು, ಸಾಕ್ಷಿ ಅವರನ್ನು ಗುರುತಿಸಿರುತ್ತಾರೆ. ಮು.ಮಾ-1 ರ ದೊಣ್ಣೆಯಿಂದ 1 ನೇ ಆರೋಪಿ ನನ್ನ ತಾಯಿಗೆ ಹೊಡೆದುದ್ದಾಗಿದೆ. ಮು.ಮಾ-2 ಹಾಗೂ 3 ಸ್ವೆಟರ್ ಹಾಗೂ ನೈಟಿ ನನ್ನ ತಾಯಿಯಾದ್ದಾಗಿರುತ್ತದೆ.

**<u>ಪಾಟೀಸವಾಲು- 1, 3, 4 ನೇ ಆರೋಪಿ ಪರವಾಗಿ ಶ್ರೀ. ಕೆ.ಎಸ್.ಕೆ. ವಕೀಲರಿಂದ:</u>**

ಸದರಿ ಸ್ಥಳದ ಸುತ್ತಮುತ್ತ 3-4 ಮನೆಗಳು ಇವೆ. ಆ ದಿನ ಒಂದು ಗಂಟೆಯ ಕಾಲ ಗಲಾಟೆ ಆಗಿರಬಹುದು. ಅಲ್ಲಿ ಆ ದಿನ ನೂಕುನುಗ್ಗಲು ಆಗುತ್ತಿದ್ದು, ಜನರು ಸೇರಿದ್ದರು. ಆ ದಿನ ನನಗೆ ಯಾವುದೇ ಗಾಯಗಳು ಆಗಿಲ್ಲ. 1 ನೇ ಆರೋಪಿ ನನ್ನ ತಾಯಿಗೆ ಹಲ್ಲೆ ಮಾಡುವ ಸಂದರ್ಭದಲ್ಲಿ ನನ್ನ ತಾಯಿಯನ್ನು ಹೊರತುಪಡಿಸಿ ನಮಗೆ ಯಾರಿಗೂ ತೀವ್ರವಾದ ಗಾಯಗಳು ಆಗಿರುವುದಿಲ್ಲ. ಗಲಾಟೆ ಆಗುವ ದಿನ ನನ್ನ ತಂದೆ ಅಲ್ಲಿ ಇದ್ದಿರಲಿಲ್ಲ. ಬೆಳಿಗ್ಗೆ 6.30 ಗಂಟೆ ಸಮಯಕ್ಕೆ ನಾವು ಅಲ್ಲಿಗೆ ಹೋಗಿದ್ದೆವು ಆ ಸಂದರ್ಭದಲ್ಲಿ ನನ್ನ ತಂದೆ ಇದ್ದಿರಲಿಲ್ಲ. ನನ್ನ ತಂದೆ ಸಂಜೆ ಬಂದು ಗಲಾಟೆಯ ಬಗ್ಗೆ ವಿಚಾರಿಸಿರಲಿಲ್ಲ. ನಾವು ಈಗಲೂ ಸಹ ನಮ್ಮ ಅಜ್ಜನ ಮನೆಯಲ್ಲೇ ಇದ್ದೆವು ಮತ್ತು ಈ ಘಟನೆ ಆಗುವ ಮೊದಲು ಸಹ ನಾವು ಅಲ್ಲಿಯೇ ಇದ್ದೆವು.

2017 ರ ಇಸವಿಯಲ್ಲಿ ನನ್ನ ತಂದೆ ಸದರಿ ಜಾಗಕ್ಕೆ ಬೇಲಿ ಹಾಕಿದ್ದರು. ನನ್ನ ತಂದೆ ಸದರಿ ಜಾಗಕ್ಕೆ ಬೇಲಿ ಹಾಕಿರಲಿಲ್ಲ ಮತ್ತು ಆ ದಿನ ನಾನು ಮತ್ತು ನನ್ನ ತಂಗಿ ಸದರಿ ಸ್ಥಳಕ್ಕೆ ಹೋಗಿರಲಿಲ್ಲ ಎಂದರೆ ಸರಿಯಲ್ಲ. ದಿನಾಂಕ 18-07-2022 ರಂದು ನಾನು ಮತ್ತು ನನ್ನ ತಂಗಿ ನನ್ನ ತಾಯಿಯ ಜೊತೆಯಲ್ಲಿ ಸದರಿ ಸ್ಥಳಕ್ಕೆ ಹೋಗಿರಲಿಲ್ಲ ಮತ್ತು ನನ್ನ ತಾಯಿಗೆ ಬೇಕಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. 1 ನೇ ಆರೋಪಿ ಮತ್ತು ಅವರ ಹೆಂಡತಿ ಸದರಿ ಜಾಗದಲ್ಲಿ ಮನೆ ಕಟ್ಟಿಕೊಂಡರು ಇದ್ದರು ಮತ್ತು ನನ್ನ ತಾಯಿ ಮನೆಯಿಂದ ಹೊರಗೆ ಹಾಕುವ ಸಂದರ್ಭದಲ್ಲಿ ಮಾಡಿಕೊಂಡ ಗಾಯಗಳಿಗೆ ಆರೋಪಿಗಳ ವಿರುದ್ಧ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ನನ್ನ ಮುಖ್ಯವಿಚಾರಣೆಯಲ್ಲಿ ಹೇಳಿದಂತೆ ಯಾವುದೇ ಆರೋಪಿಗಳು ನನ್ನ ತಾಯಿಗೆ ಹಲ್ಲೆ ಮಾಡಿರಲಿಲ್ಲ ಮತ್ತು ನಮ್ಮ ಜಾತಿ ಯಾವುದು ಎಂದು ಆರೋಪಿಗಳಿಗೆ ಗೊತ್ತಿಲ್ಲ ಎಂದರೆ ಸರಿಯಲ್ಲ.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)
ಓ. ಹೇ. ಕೇ. ಸರಿ ಇದೆ.
ಸಹಿ/-xxx

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ